ಅವನಿಗೆ ಚಳ್ಳೆಹಣ್ಣು ತಿನ್ನಿಸಲು ನಾಲ್ಕು ಕಣ್ಣುಗಳು ಬೇಕು. ಮೂರು ತಿಂಗಳಾದವು. ಒಬ್ಬ ತುರ್ಕಿ ಮೌಲವಿ ನನ್ನೂರಿಗೆ ಬಂದಿದ್ದನು. ಹೆಣ್ಣುಮಕ್ಕಳಿಗೆ ಮಕ್ಕಳಾಗುವ ತಾಯಿತ ನೀಡುತ್ತಿದ್ದನು ಮತ್ತು ಮಕ್ಕಳಿಗೆ ಔಷಧಿ ಕೊಡುತ್ತಿದ್ದನು. ಚೌಧರಿಯ ಆಲದಮರದ ಕೆಳಗೆ ಚಾಪೆ ಹಾಸಿಕೊಂಡು ಹುಕ್ಕಾ ಸೇದುತ್ತಿದ್ದನು. ಅಲ್ಲದೇ ಜರ್ಮನರು ದೊಡ್ಡ ಪಂಡಿತರು, ದೊಡ್ಡ ವಿದ್ವಾಂಸರು ಎಂದು ಹೇಳುತ್ತಿದ್ದ. ವೇದ ಓದಿ ಓದಿ ಅದರಿಂದ ವಿಮಾನ ನಡೆಸುವ ವಿದ್ಯೆಯನ್ನು ತಿಳಿದುಕೊಂಡಿದ್ದಾರೆ. ಹಸುವನ್ನು ಕೊಲ್ಲುವುದಿಲ್ಲ. ಹಿಂದುಸ್ತಾನಕ್ಕೆ ಬಂದರೆ ಗೊಹತ್ಯೆಯನ್ನು ನಿಲ್ಲಿಸಿ ಬಿಡುವರು. ಸರಕಾರದ ಆಡಳಿತ ಇಲ್ಲದಾಗುವುದು. ಆದ್ದರಿಂದ ಅಂಚೆಕಚೇರಿಯಿಂದ ಹಣ ತೆಗೆದುಬಿಡಿ, ಎಂದು ಪೇಟೆಯ ವ್ಯಾಪಾರಿಗಳನ್ನು ದಾರಿ ತಪ್ಪಿಸುತಿದ್ದ. ಅಂಚೆಯಣ್ಣ ಪೌಲ್ಹೂರಾಮನೂ ಸಹ ಗಾಬರಿಯಾಗಿದ್ದನು. ನಾನು ಆ ಮುಲ್ಲಾರ ದಾಡಿ ಬೋಳಿಸಿದ್ದೆ ಮತ್ತೆ 'ಇನ್ನೂ ನನ್ನ ಊರಲ್ಲಿ ಕಾಲಿಟ್ಟರೆ ಅಷ್ಟೇ...' ಎಂದು ಊರ ಹೊರಗೆ ಹಾಕಿ ಹೇಳಿದ್ದೆ.

ಸಾಹೇಬನ ಜೇಬಿನಿಂದ ಹೊರತೆಗೆದ ಪಿಸ್ತೂಲಿನಿಂದ ಗುಂಡು ಹಾರಿ ಲಹನಾನ ತೊಡೆಗೆ ಬಡಿಯಿತು. ಇತ್ತ ಲಹನಾನ ಹೆನರಿಮಾರ್ಟಿನಿಯ ಎರಡು ಫಾಯರ್‌ಗಳು ಸಾಹೇಬನ ಕಪಾಳಕ್ಕೆ ಬಾರಿಸಿದವು. ಗುಂಡಿನ ಮೊರೆತ ಕೇಳಿ ಎಲ್ಲರೂ ಓಡಿ ಬಂದರು.

'ಏನಾಯಿತು?' ಬೋಧಾ ಚೀರಿದನು. ಒಂದು ಪಿತ್ತ ನೆತ್ತಿಗೇರಿದ ನಾಯಿ ಬಂದಿತ್ತು, ಅದನ್ನು ಕೊಂದೆ ಎಂದು ಹೇಳುತ್ತ ಲಹನಾಸಿಂಹನು ಉಳಿದೆಲ್ಲರಿಗೂ ವಸ್ತುಸ್ಥಿತಿಯನ್ನು ವಿವರಿಸಿದನು. ಎಲ್ಲರೂ ಬಂದೂಕು ತೆಗೆದುಕೊಂಡು ಸಿದ್ಧರಾದರು. ಲಹನಾ ರುಮಾಲು ಹರಿದು ಗಾಯಗಳಿಗೆ ಎರಡೂ ಬದಿಯಲ್ಲಿ ಗಟ್ಟಿಯಾಗಿ ಬಿಗಿದು ಪಟ್ಟಿ ಕಟ್ಟಿದನು. ಗಾಯ ಮಾಂಸದಲ್ಲಿಯೇ ಇತ್ತು. ಪಟ್ಟಿಗಳನ್ನು ಬಿಗಿದಿದ್ದರಿಂದ ರಕ್ತ ಹರಿಯುವುದು ನಿಂತುಕೊಂಡಿತು.

ಇಷ್ಟರಲ್ಲೇ ಎಪ್ಪತ್ತು ಜರ್ಮನ್‌ರು ಚೀರಿ ಕಣಿವೆಗೆ ನುಗ್ಗಿದರು. ಸಿಖ್ಖರ ಬಂದೂಕುಗಳ ಮಹಾಪೂರ ಮೊದಲ ದಾಳಿಯನ್ನು ತಡೆಯಿತು. ಎರಡನೆಯದನ್ನು ತಡೆಯಿತು, ಆದರೆ ಇಲ್ಲಿದ್ದವರು ಎಂಟು ಜನ. ಲಹನಾಸಿಂಹ ಒಂದೆಸಮನೆ ಗುಂಡು ಹಾರಿಸುತ್ತಿದ್ದನು. ಅವನು ನಿಂತುಕೊಂಡಿದ್ದನು, ಇನ್ನುಳಿದವರು ಮಲಗಿ ಬಂದೂಕು ಚಲಾಯಿಸುತ್ತಿದ್ದರು ಮತ್ತೆ ಅವರು ಎಪ್ಪತ್ತು ಜನ. ತಮ್ಮ ಸತ್ತ ಸಹೋದರರ ಶರೀರದ ಮೇಲೇರಿ ಜರ್ಮನ್‌ರು ಮುಂದೆ ನುಗ್ಗಿ ಬರುತ್ತಿದ್ದರು. ಕೆಲವೇ ಕ್ಷಣಗಳಲ್ಲಿ ಅವರು...

ಒಮ್ಮಿಂದೊಮ್ಮಲೆ ಕೂಗು ಕೇಳಿಸಿತು, 'ವಾಹ್, ಗುರೂಜಿ ವಿಜಯ ನೀಡಿದರು! ವಾಹ್, ಗುರೂಜಿ ದಾ ಖಾಲಸಾ!' ಮತ್ತೆ ಧಡಾಧಡ ಬಂದೂಕುಗಳ ಫಾಯರ ಜರ್ಮನ್‌ರ ಬೆನ್ನಿಗೆ ತಾಕತೊಡಗಿದವು. ಸರಿಯಾದ ವೇಳೆಗೆ ಜರ್ಮನ್‌ರು ಬೀಸುಕಲ್ಲಿನ ಎರಡು ಕಲ್ಲುಗಳ ಮಧ್ಯೆ ಸಿಕ್ಕಿಕೊಂಡಂತಾಯಿತು. ಹಿಂದಿನಿಂದ ಸುಬೇದಾರ ಹಜಾರಸಿಂಹರ ಜವಾನರು ಬೆಂಕಿ ಮಳೆಗರೆಯುತ್ತಿದ್ದರೆ ಎದುರಿಗೆ ಲಹನಾಸಿಂಹನ ಸಂಗಾತಿಗಳ ಬಂದೂಕು ಫಾಯರ ಮಾಡುತ್ತಿದ್ದವು. ಹತ್ತಿರ ಬಂದ ನಂತರ ಹಿಂದಿನವರೂ ಸಹ ಬಂದೂಕಿನಿಂದ ಫಾಯರ ಮಾಡತೊಡಗಿದರು.

ಇನ್ನೊಂದು ಹರ್ಷಪೂರ್ಣ ಧ್ವನಿ-'ಅಕಾಲ ಸಿಖ್ಖರ ಸೇನೆ ಬಂತು. ವಾಹ್, ಗುರೂಜಿ ವಿಜಯ ನೀಡಿದರು. ವಾಹ್ ಗುರೂಜಿ ದಾ ಖಾಲಸಾ! ಸತ್ ಸಿರಿ ಅಕಾಲ ಪುರುಷ!' ಅಂತೂ ಯುದ್ಧ ಕೊನೆಗೊಂಡಿತು. ಅರವತ್ಮೂರು ಜರ್ಮನಿಯರು ಒಂದೊ ಹತ್ಯೆಯಾಗಿದ್ದರು ಇಲ್ಲಾ ನರಳುತ್ತಿದ್ದರು. ಸಿಖ್ಖರಲ್ಲಿ ಹದಿನೈದು ಸೈನಿಕರ ಪ್ರಾಣಹೋಯಿತು. ಸುಬೇದಾರನ ಬಲಹೆಗಲಿನಲ್ಲಿ ಗುಂಡು ಹಾದುಹೋಯಿತು. ಲಹನಾಸಿಂಹನ ಪಕ್ಕೆಲುಬಿನಲ್ಲಿ ಒಂದು ಗುಂಡು ಬಡಿಯಿತು. ಅವನು ಗಾಯವನ್ನು ಕಂದಕದ ಮಣ್ಣಿನಿಂದ ತುಂಬಿದನು ಮತ್ತು ಇನ್ನೊಂದಕ್ಕೆ ರುಮಾಲನ್ನು ಬಿಗಿಯಾಗಿ ಬಿಗಿದು ಸೊಂಟಪಟ್ಟಿಯ ಹಾಗೆ ಸುತ್ತಿಕೊಂಡನು. ಎರಡನೆ ಗಾಯ ಭಾರಿ ಗಾಯವಾಗಿದೆಯೆಂದು ಯಾರಿಗೂ ಗೊತ್ತಾಗಲಿಲ್ಲ.

ಯುದ್ಧದ ಸಮಯದಲ್ಲಿ ಚಂದಿರನು ಉದಯಿಸಿದ್ದನು. ಆ ಬೆಳದಿಂಗಳಿನಿಂದ ಸಂಸ್ಕೃತ ಕವಿಗಳು ಚಂದಿರನಿಗೆ ನೀಡಿದ 'ಛವಿ' ಎನ್ನುವ ಹೆಸರು ಸಾರ್ಥಕವಾಗುತ್ತದೆ. ಅಲ್ಲದೇ ಬಾಣಭಟ್ಟನ ಭಾಷೆಯಲ್ಲಿ ದಂತವೀಣೋಪದೇಶಾಚಾರ್ಯ ಎಂದು ಕರೆಯಲ್ಪಡುವಂಥ ಗಾಳಿ ಬೀಸುತ್ತಿತ್ತು. ನಾನು ಸುಬೇದಾರರ ಹಿಂದೆ ಓಡೋಡಿ ಹೋದಾಗ ಮಣಗಟ್ಟಲೆ ಫ್ರಾನ್ಸಿನ ಮಣ್ಣು ನನ್ನ ಬೂಟುಗಳಿಗೆ ಮೆತ್ತ